ತಾಯಿಯನ್ನು ಕಳೆದುಕೊಂಡು ಮಲತಾಯಿಯ ನೆರಳಿನಲ್ಲಿ ಅವರಿವರ ಮನೆಗಳಲ್ಲಿ ಮುಸುರೆಗಳನ್ನು ತೊಳೀತಾ, ಗೌಡ್ರ ಮನೆಯಂಗಳಗಳನ್ನು ಕಸಗುಡಿಸುತ್ತ ಬೆಳೆದವಳು. 'ಮುಸುಂಡೆ ಮುಂಡೆದು ಇದುಕ್ಕೆ ಸುಳಿಸುದ್ದವಿಲ್ಲಾ, ಯಾವ ಗಂಡು ಬಂದು ನೋಡಿಕೊಂಡು ಹೋದ ತಕ್ಷಣ ಒಳ್ಳೆ ಮಾತು ಅಂತನೇ ಹೇಳಾಂಗಿಲ್ಲಾ ದರಿದ್ರ ಮುಂಡೆದು' ಅಂತ ಮಲತಾಯಿ ಬೈಗುಳದ ಹಿಂಸೆಯನ್ನು ಸಹಿಸಿಕೊಂಡು ತವರುಮನೆಯ ಬದುಕನ್ನು ಸವಿಸಿದವಳು. ಇದನ್ನೆಲ್ಲಾ ಕಂಡು ಕಾಣದಂತೆ ತನ್ನ ಮೊಪ್ಲರಿನಲ್ಲಿ ಸಿಹಿ ತಿಂಡಿಗಳನ್ನು ಬಚ್ಚಿಟ್ಟುಕೊಂಡು ಬಂದು, ತಿನ್ನು ಕೂಸೆ ಎಂದು ಧೈರ್ಯ ತುಂಬುವ ತಂದೆ. ಇದಿಷ್ಟು ತನ್ನ ಮುದ್ದೇಪುರದಲ್ಲಿ ಸವಿಸಿದ ಬದುಕು... ಇವಳನ್ನ ಗೆಜ್ಜೆಪುರದ ಹೊಲೆಯರ ಕೇರಿಯ ಕರಿಯನಿಗೆ ಬಾಲ್ಯವಿವಾಹ ಮಾಡಿ ಆಕೆಯ ತವರಿನವರು ಕೈತೊಳೆದುಕೊಂಡಿದ್ರು, ಕಟ್ಟಿಕೊಂಡ ಗಂಡನ ಜೊತೆಯಾದ್ರೂ ನೆಮ್ಮದಿ ಸಿಗಬಹುದಂತ ಅಂದುಕೊಂಡಿದ್ರೆ, ಕುಟುಂಬದಾಗ ಕಟ್ಟಿಕೊಂಡ ಗಂಡನೊಂದಿಗೂ ಕಣ್ಣೀರಿನಲ್ಲಿ ಕೈತೊಳೆದುಕೊಂಡು ತೀರದ ಕಷ್ಟಗಳನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡು, 'ಕಷ್ಟ ಅಂಬೋದು ಮನುಷ್ಯನಿಗೆ ಬರದೆ, ಮರುಕ್ಕೆ ಬತ್ತದಾ. ಅದೇನೋ ಗಾದೆಯಿದೆ 'ಕೆಟ್ಟಮೇಲೆ ನಾಯಿಗೂ ಬುದ್ಧಿಬರುತ್ತೇ' ಅಂತಾರೆ, ಇವತ್ತಲ್ಲಾ ನಾಳೆ ನನ್ನ ಗಂಡನಿಗೆ ಬುದ್ಧಿ ಬತ್ತದೆ' ಎಂಬ ದಿಟ್ಟ ನಿಲುವಿನಲ್ಲಿ ಬದುಕನ್ನು ನೂಕಿಕೊಂಡು ಬಂದವಳು. ಗಂಡನಾದೋನು, ಒಂದು ದಿನಾನು ತನ್ನ ಸಂಸಾರದ ಭಾರ ಹೊರದೆ ಕುಡಿದು ಬಂದು ಹೊಡೆದು ಗೋಳೋ ಎನ್ನಿಸುತ್ತಿದ್ದ. 'ಕುಡುಕನೋ ತಿರುಕನೋ ಗಂಡನೆನ್ನೂವವನಿದ್ದರೆ, ಹೆನ್ತಿಗೆ ಆನೆ ಬಲವಂತೆ' ಎಂದು ಮನಸ್ಸಿನಲ್ಲಿ ಗೊಣಗುತ್ತ ಗೌಡ್ರ ಹೊಲದಲ್ಲಿ ಕ್ಯಾಮೆ ಮಾಡಿಕೊಂಡು ಬಂದು ಮೂರು ಮುದ್ದೆ ಮಾಡಿ ಮಲಗುತ್ತಿದ್ಲು. ಅದರೆ ಒಂದು ದಿನ ಬೆಳ್ಳಂಬೆಳ್ಳಿಗ್ಗೆ, ಊರಿನವರೆಲ್ಲ ಗುಸುಗುಸು– ಗುನುಗುನು ಮಾತಾಡುತ್ತಿದ್ದರು. ಆ ದಿನ ರಾತ್ರಿ ಕರಿಯ ಮನೆಗೆ ಬಂದಿರಲಿಲ್ಲ, ಅವತ್ತೇ ಕರಿಯ, ಗೌಡರ ಹೊಲಕ್ಕೆ 'ನಾನು ಕ್ಯಾಮಿಗೆ ಬತ್ತಿನಕಣಮ್ಮಿ' ಎಂದು, ಜೊತೆಯಲ್ಲಿಯೇ ಗೌಡರ ತೋಟ್ಕೆ ಕೆಲಸಕ್ಕೆ ಹೋಗಿದ್ರು, 'ಹೇಗೋ ನನ್ನ ಗಂಡಂಗೆ ಬುದ್ಧಿ ಬಂತೆಂದು' ಗೌಡರ ತಾವ ಕೈಕಾಲು ಬಿದ್ದು ಕೆಲಸಕ್ಕೆ ಹಚ್ಚಿದ್ಲು. ಅವೊತ್ತೇ ಗೌಡ್ರು ಕರಿಯನ್ನ ಮಾವಿನ ಹಣ್ಣು ಮಾರಲು ಪೇಟೆಗೆ ಕಳುಹಿದ್ದ. ಅಂದು ಬೆಳಗ್ಗೆ ಎದ್ದು ಸಂಕವ್ವ ಹಿಟ್ಟು ಬೇಯಿಸುವುದಕ್ಕೆ ನೀರು ತರಲು ಕೆರೆಯ ಕಡೆ ನಡೆದ್ಲು, ದಾರಿ ಉದ್ದಕ್ಕೂ ಸಂಕವ್ವನನ್ನು ನೋಡಿ 'ಆಯ್ಯೋ...! ಪಾಪ, ಮಕ್ಳು ಇಲ್ಲ ಮರಿಯಿಲ್ಲ, ಸಣ್ಣ ವಯಸ್ಸಿನ್ಯಾಗೇ... ಎಂಥ ಕೆಲಸ ಆಗಿಬಿಟ್ಟೋತ್ತೋ' ಎಂದು ಗುನುಗುಟ್ಟುತ್ತ ಮನೆಯೊಳಕ್ಕೆ ಹೋದರು. ಸಂಕವ್ವ ಮಾತನ್ನು ಕೇಳಿಸಿಕೊಳ್ದೆ ನೀರು ತುಂಬಿಕೊಂಡು ಕೇರಿಗೆ ಹಿಂತಿರುಗಿದ್ಲು. ಅತ್ತ ಕರಿಯ ತನ್ನ ಬುದ್ಧಿಗೆ ಬೆಂಕಿ ಹಚ್ಚಿ, ಮಾವಿನ ಹಣ್ಣು ಮಾರಿದ ರೊಕ್ಕದಲ್ಲಿ ಕುಡಿದು, ಮತ್ತೇರಿದ ಅಮಲಿನಲ್ಲಿ ಪೇಟೆಯಿಂದ ಕಗ್ಗತ್ತಲ್ಲಿ ನಡೆದುಕೊಂಡು ಬರುವಾಗ ಗೌಡರ ಹೊಲದ ಪಾಳು ಬಾವಿಯಲ್ಲಿ ಬಿದ್ದು ಜೀವವನ್ನು ಹೆಗಲ ಮೇಲೆ ಹೊತ್ತು ತನ್ನ ಹೆಂಡತಿ ಬರುವುದರ ಕಡೆ ದಿಟ್ಟಿಸಿನೋಡುತ್ತಿದ್ದ.

ಕರಿಯನ ವಿಷ್ಯ ತಿಳಿದ ಪಕ್ಕದ ಮನೆಯ ಈರಿ ಸಂಕವ್ವನಿಗೆ ಹೇಳಿದ್ಲು. ಹೌಹಾರಿ ಸಂಕವ್ವ ಎದ್ದುಬಿದ್ದು ಗೌಡರ ಹೊಲಕ್ಕೆ ಬುಸುಗುಟ್ಟುತ್ತ ಓಡಿ ಹೋದ್ಲು. ಸಂಕವ್ವ ಬರುವುದರೊಳಗಾಗಲೇ, ಗೌಡರ ನಾಲ್ಕೈದು ಆಳುಗಳು ಬೆಳ್ಳಂಬೆಳ್ಗೆ ತೋಟಕ್ಕೆ ನೀರುಣಿಸಲು ಹೋದಾಗ, ತೋಟದಪಾಳು ಬಾವಿಯಲ್ಲಿ ಬಿದ್ದು 'ಆಯ್ಯೋ ಯಪ್ಪಾ' ಎನ್ನುವ ಸದ್ದನ್ನು ಕೇಳಿ ಆಳುಗಳು ಬಾವಿಯ ತಾವ ಬಂದು ನೋಡಿದ್ರೇ, ಕರಿಯ ಬಾವಿಯೊಳಗೆ ಬಿದ್ದು ಕೈಕಾಲು ಮುರಿದುಕೊಂಡಿದ್ದ. ಆ ನಾಲ್ಕೈದು ಆಳುಗಳು ಬಾವಿಯೊಳಗೆ ಧಬ್ ಧಬ್ ಅಂತ ಇಳಿದು, ಕರಿಯನನ್ನು ಹೆಗಲ ಮೇಲೆ ಹೊತ್ತುಕೊಂಡು ಬರುವುದರೊಳಗೆ, ಸಂಕವ್ವ ಹಿಟ್ಟು ಬೇಯಿಸುವುದನ್ನು ಮೂಲೆಗೆಸೆದು, ಬುಸುಗುಟ್ಟುತ್ತ ಓಡಿ ಬಂದು ಕರಿಯನನ್ನು ನೋಡ್ತಾಳೆ. ಕರಿಯನಿಗೆ ಸೊಂಟ ಮುರಿದಿರುವುದರ ಜೊತೆಗೆ, ಬಾಯಿಯಲ್ಲಿ ರಕ್ತ ಕಾರುತ್ತಿತ್ತು. ಹಲ್ಲುದುರಿದಂತೆ ಭಾಸವಾಯ್ತು. ಯಾವ ದಿಕ್ಕು ತೋಚದೆ ಸಂಕವ್ವ ಕೇರಿ ಜೋಡಿ ದುರುಗವ್ವನಿಗೆ ಹರಕೆ ಕಟ್ಟಿಕೊಂಡಳು. ಅಲ್ಲೇ ಹೊಲೆಯರ ಕೇರಿಯ ಜನರೆಲ್ಲಾರು ಕರಿಯನನ್ನು ಅಪಮಾನವಾಗಿ ಆಡಿಕೊಳ್ಳ